

ಎಡದಿಂದ ಬಲಕ್ಕೆ:

1. ಅನ್ಯಲೋಕಕ್ಕೇ ಸರಿ ಈ ಸಿಂಗಾರ (4)
3. ವರದಿ ಏನೇ ಬಂದರೂ ಪ್ರತಿಭಟನೆ ಖಂಡಿತ (3)
4. ಪಕ್ಷಿ ಜೊತೆಗಿನ ದೃಶ್ಯ ಭೂಮಿ– ಆಕಾಶ ಸೇರುವಲ್ಲಿ (3)
6. ಮುಂಡಾಸು ಧರಿಸಿದವನ ಸ್ಥಳ ಹಳೆಯ ಚೆನ್ನೈ (4)
7. ಬಹಳ ನೀರು ವಿತರಿಸಬೇಕಾದ ಬೇಸಾಯ ಕ್ರಮ (4)
8. ಆ ಆನೆಯ ವರ್ತನೆ ಒಂದೇ ರೀತಿ ಇಲ್ಲ (4)
10. ಜಟ್ಟಿಯನ್ನೇ ಕೆಡವಿದವರು ಒಳ್ಳೇ ಮನುಷ್ಯರಲ್ಲ (4)
12. ಪೆಕರನ ಕೈಯಲ್ಲಿ ಚಕ್ಕನೆ ನೀರು ಚಿಮ್ಮುವ ಸಾಧನ (4)
14. ಬಾವ ಕಂಡ ಹಳ್ಳ ನಿಜವಾಗಿ ನೀರಿಲ್ಲದ ಜಲ ಮೂಲ (4)
16. ನೋವಿರಲಿ ಜತೆಗೇ ಸಂತಸ ಇದ್ದೀತು (3)
17. ವಜ್ರ ಮಾರುವಲ್ಲಿ ತಾವರೆ ಹೇಗೆ? (3)
18. ಗೆದ್ದದ್ದನ್ನು ಸೂಚಿಸಲು ಕಾಲಿನಾಭರಣದ ಸದ್ದು (4)

ಮೇಲಿಂದ ಕೆಳಕ್ಕೆ:

1. ಅಮ್ಮನಿಗೂ ದಯೆ ತೋರಿಸದ ನೀಚ (3)
2. ಸುಶಿಕ್ಷಿತರನ್ನು ತಪ್ಪದೇ ಕಾಪಾಡು (3)
3. ವೇಷ ಧರಿಸಿ ಬಂದವನೇ ಕಾಲನ ಕೈಸೇರಿದ (4)
5. ನಿಜ ಏನೇ ಇರಲಿ, ತಾಯಿ ಎಲ್ಲಿ? (3)
7. ಕರಡಿಯನ್ನು ಕಾಡಿಸಿದ್ದು ಬಾಯಾರಿಕೆ (4)
9. ಕರೆತರುವ ಮೊದಲು ಕಾಯಿಪಲ್ಲೆ ಬೇಕು (4)
11. ನಿಜವಾಗಿ ಆತ ಸೇವಕ (3)
13. ಪಂಚಭೂತಗಳಂತೆ ಐದು ತೋಳು (4)
14. ಅಲ್ಲಿನ ಹವಾಗುಣಕ್ಕೆ ತಕ್ಕಂಥ ಚಪ್ಪಲಿ (3)
15. ವಾದನ ವಿಧಾನ ಕುರಿತ ವಾಕ್ಸಮರ (3)

### ಪದಬಂಧ 21-02-2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸಭ್ಯಜನ; 3. ವಿಳಂಬ; 4. ವರ್ತನೆ; 6. ವನಚರ; 7. ರಿಷಿಪುತ್ರ; 9. ರಾಮನಾಮ; 12. ಪರವಶ; 14. ತ್ವರಿತ; 15. ಕ್ರಮಣ; 16. ರಮ್ಯಧಾಮ.

ಮೇಲಿಂದ ಕೆಳಕ್ಕೆ:

1. ಸಬಕಾರ; 2. ನವನಾರಿ; 3. ವಿಮಾನ; 6. ವಸುಂಧರಾ; 5. ನೆನಪು; 8. ತ್ರಯೋದಶ; 10. ಮಹತ್ವ; 11. ಮತಾಂತರ; 12. ಪರಾಕ್ರಮ; 13. ವರುಣ.


# ಪ್ರಶ್ನಾಂಕಣ

## 'ಪ್ರಪ್ರಥಮ ನಗರ' ಯಾವುದು?

ಅದು ಯಾವುದೇ ಆಗಿರಲಿ, ಆ ಪ್ರಪ್ರಥಮ ನಗರವನ್ನು ಈಗಿನ ಯಾವ ನಗರಕ್ಕೂ ಹೋಲಿಸುವುದು ಸಾಧ್ಯವಿಲ್ಲ. ಅಷ್ಟೇ ಅಲ್ಲ, ಅದು ಈಗ ಕೇವಲ ಭಗ್ನ ಅವಶೇಷ ರೂಪದಲ್ಲಿ ಉಳಿದಿದೆ ಅಷ್ಟೆ. ಈಗಿನ ಟರ್ಕಿ ದೇಶದ ರಾಜಧಾನಿಯಾದ 'ಅಂಕಾರಾ' ನಗರದ ದಕ್ಷಿಣಕ್ಕೆ ಮುನ್ನೂರ ಇಪ್ಪತ್ತು ಕಿಲೋಮೀಟರ್ ದೂರದಲ್ಲಿ 'ಮಾನವ ನಿರ್ಮಿತ ಪ್ರಪ್ರಥಮ ನಗರ'ದ ಅವಶೇಷಗಳು ಕಾಣಸಿಗುತ್ತವೆ. ಆ ಶಹರದ ಹೆಸರು, ಕಾಲ, ವಿನ್ಯಾಸ, ವಿಸ್ತಾರ... ಕಡೆಗೆ ಅದರ ಅಂತ್ಯ ಕೂಡ ತುಂಬ ಕುತೂಹಲಕರ, ವಿಸ್ಮಯಕರ.

ಬೃಹತ್ ಮಣ್ಣು ದಿಬ್ಬವೊಂದರಲ್ಲಿ ಅಡಗಿ ಹೋಗಿದ್ದ ಆ ನಗರ ಪತ್ತೆಯಾದದ್ದು 1961 ರಲ್ಲಿ. 'ಕೆರೆಸಾಂಬ' ನದೀ ದಂಡೆಯಲ್ಲಿ ನಿರ್ಮಾಣಗೊಂಡಿದ್ದ ಆ ನಗರದ ಕಾಲ ಕ್ರಿ.ಪೂ. 7000. ಎಂದರೆ ಈಗ್ಗೆ 9000 ವರ್ಷ ಹಿಂದೆ! ಹಾಗೆಂದರೆ ಪೂರ್ಣ ಪ್ರಮಾಣದ ಅತ್ಯಂತ ಪ್ರಾಚೀನ ನಾಗರಿಕತೆಗಳೆಂದು ವಿಖ್ಯಾತವಾಗಿರುವ ಮೆಸಪೊಟಾಮಿಯಾ ಮತ್ತು ಈಜಿಪ್ಟ್‌ನ ನಾಗರಿಕತೆಗಳಿಗಿಂತ ಮೂರು ಸಾವಿರ ವರ್ಷ ಹಿಂದೆ. ಆ ನಗರದ ಹೆಸರು 'ಚಹ್‌ಟಹ್ಲ್ ಹೂಯುಕ್.'

ಚಹ್‌ಟಹ್ಲ್ ಹೂಯುಕ್ ನಗರದ್ದು ತುಂಬ ವಿಚಿತ್ರ ವಿಶಿಷ್ಟ ವಿನ್ಯಾಸ (ಚಿತ್ರ ನೋಡಿ) ಒಟ್ಟು ಎರಡು ಸಾವಿರ ಮನೆಗಳಿದ್ದ, ಒಟ್ಟು ಸುಮಾರು ಹನ್ನೆರಡು ಸಾವಿರ ಜನಸಂಖ್ಯೆಯಿದ್ದ ಆ ನಗರದ ಮನೆಗಳದು ಒಂದಕ್ಕೊಂದು ಒತ್ತಿ ನಿಂತ



ಜೇನುಗೂಡಿನಂಥ ವಿನ್ಯಾಸ. ಅತಿ ವಿಶೇಷ, ಅಷ್ಟೇ ವೈಚಿತ್ರ್ಯ ಏನೆಂದರೆ ಅಲ್ಲಿ ಒಂದೇ ಒಂದು ರಸ್ತೆಯೂ ಇಲ್ಲ. ಎಲ್ಲ ಜನರ ನಡೆದಾಟವೂ ಚಾವಣಿಗಳ ಮೇಲೆಯೇ. ಬೇರೆ ಬೇರೆ ಎತ್ತರದ ಚಾವಣಿಗಳನ್ನು ಏರಲು ಇಳಿಯಲು ಏಣಿಗಳ ಬಳಕೆ. ಚಾವಣಿಯಿಂದಲೇ ಏಣಿ ಮೂಲಕವೇ ಮನೆಗಳೊಳಕ್ಕೂ– ಹೊರಕ್ಕೂ ಓಡಾಟ! ಹಾಗಾಗಿ ಯಾವ ಮನೆಗೂ ಮುಂಬಾಗಿಲು ಇಲ್ಲ. ಬಿಸಿಲಲ್ಲಿ ಸುಟ್ಟ ಇಟ್ಟಿಗೆಗಳಿಂದಲೇ ಮನೆಗಳ ಅಡಿಪಾಯ–ಗೋಡೆ ನಿರ್ಮಾಣ. ಮರದ ಕಂಬಗಳ ಆಧಾರದಲ್ಲಿ ತೊಲೆ ತಡಿಕೆಗಳ ಹಾಸು. ಅದರ ಮೇಲೆ ಗಟ್ಟಿ ಮಣ್ಣಿನ ಚಾವಣಿ.

ಕೃಷಿಯೇ ಪ್ರಧಾನ ಕಸುಬು ಆಗಿದ್ದ ಆ ಜನ ಕಾಡುಪ್ರಾಣಿಗಳನ್ನೂ ಆಹಾರಕ್ಕಾಗಿ ಬೇಟೆಯಾಡುತ್ತಿದ್ದರು. ಇಡೀ ನಗರದ ಆಡಳಿತ ಓರ್ವ ಮಹಿಳೆಯದು. 'ಪವಿತ್ರ ರಾಣಿ' ಎಂದೇ ಆಕೆಗೆ ಅಭಿಧಾನ.

ಚಹ್‌ಟಹ್ಲ್ ಹೂಯುಕ್ ನಗರ ಕ್ರಿ.ಪೂ. 5400 ರವರೆಗೆ ಉಳಿದಿತ್ತು. ಹಾಗೆ ಸುಮಾರು 1600 ವರ್ಷ ಸುಭದ್ರವಾಗಿದ್ದ ಆ ನಗರ ಹೇಗೋ ಏನೋ ಇದ್ದಕ್ಕಿದ್ದಂತೆ ತೊರೆಯಲ್ಪಟ್ಟು ಹಾಳುಬಿದ್ದುಹೋಯಿತು. ಹಾಗಾದದ್ದು ಏಕೆಂಬುದು ಕಿಂಚಿತ್ತೂ ತಿಳಿಯದೆ ಇಂದಿಗೂ ನಿಗೂಢವಾಗಿಯೇ ಉಳಿದಿದೆ!

■ ಎನ್. ವಾಸುದೇವ್